ವಿಷಯ :– ಕೊಡಗು ಜಿಲ್ಲೆಯಲ್ಲಿ ಮುಜರಾಯಿ ಇಲಾಖೆ ವ್ಯಾಪ್ತಿಗೆ ಬರುವ ದೇವಸ್ಥಾನಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 727 (1145)

ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೇ ?

ಅ) ಕೊಡಗು ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಬರುವ ದೇವಸ್ಥಾನಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಆ) ಈ ದೇವಸ್ಥಾನಗಳ ಹೆಸರು ಮತ್ತು ವಿಳಾಸವನ್ನು ನೀಡುವುದು ?

ಇ) ಈ ದೇವಸ್ಥಾನಗಳಿಗೆ 1988–89 ಮತ್ತು 1989–90 ನೇ ಸಾಲುಗಳಿಗಾಗಿ ಜೀರ್ಣೋದ್ಧಾರ, ಕಲ್ಯಾಣ ಮಂಟಪ ನಿರ್ಮಾಣ ಹಾಗೂ ಇತರೆ ನಿರ್ಮಾಣ ಕೆಲಸದ ಸಲುವಾಗಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ?

ಈ) ಪ್ರತಿಯೊಂದು ದೇವಸ್ಥಾನಗಳಿಗೆ ಯಾವ ಯಾವ ಕೆಲಸಗಳಿಗೆ ಹಣ ಬಿಡುಗಡೆ ಮಾಡಲಾಗಿದೆ ? (ಪ್ರತ್ಯೇಕ ವಿವರ ನೀಡುವುದು.)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :–

ಅ) 8 (ಎಂಟು)
ಪಟ್ಟಿ ಲಗತ್ತಿಸಿದೆ.

ಆ) ಪಟ್ಟಿ ಲಗತ್ತಿಸಿದೆ.

ಇ) 1988–89 ರಲ್ಲಿ ಇಲ್ಲ. 1989–90 ರಲ್ಲಿ ರೂ. 5.00 ಲಕ್ಷ ಮಾತ್ರ.

ಈ) ಮಡಿಕೇರಿ ತಾಲ್ಲೂಕು ತಲಕಾವೇರಿಯಲ್ಲಿ ಅನ್ನ ಛತ್ರ ನಿರ್ಮಾಣಕ್ಕಾಗಿ ರೂ. 5.00 ಲಕ್ಷವನ್ನು ಅನುದಾನವಾಗಿ ಸರ್ಕಾರದ ಆದೇಶ ಸಂಖ್ಯೆ ಕಂಇ. 263 ಮುಭೂಆ 89 ದಿನಾಂಕ 30–12–89 ರಲ್ಲಿ ಮಂಜೂರು ಮಾಡಿದೆ.

| ಕ್ರಮ ಸಂಖ್ಯೆ | ಸಂಸ್ಥೆಯ ಹೆಸರು ಮತ್ತು ವಿಳಾಸ | ತಾಲ್ಲೂಕ್ |
|---|---|---|
| 1) | ಶ್ರೀ ಓಂಕಾರೇಶ್ವರ ಪಗೋಡ (ದೇವಾಲಯ) ಮಡಿಕೇರಿ | ಮಡಿಕೇರಿ |
| 2) | ಶ್ರೀ ಓಂಕಾರೇಶ್ವರ ಛತ್ರ, ಮಡಿಕೇರಿ | —,,— |
| 3) | ಶ್ರೀ ರಾಜರ ಗದ್ದುಗೆ, ಮಡಿಕೇರಿ | —,,— |
| 4) | ಶ್ರೀ ತಾವಂದ ಪಗೋಡ (ದೇವಸ್ಥಾನ) ಭಾಗಮಂಡಲ | —,,— |
| 5) | ಶ್ರೀ ತಾವಂದ ಛತ್ರ, ಭಾಗಮಂಡಲ | —,,— |
| 6) | ಶ್ರೀ ಸುಬ್ರಾಯ ದೇವಸ್ಥಾನ, ಕುಂಜಿಲಾ ಗ್ರಾಮ ನಾಪುಕ್ಲು ಹೋಬಳಿ | —,,— |
| 7) | ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಮತ್ತು ಹರಿಶ್ಚಂದ್ರ ದೇವಸ್ಥಾನ ಪಾಲೂರ ಗ್ರಾಮ | —,,— |
| 8) | ಶ್ರೀ ಇರುಪು ಶ್ರೀ ರಾಮೇಶ್ವರ ದೇವಸ್ಥಾನ ಕುರ್ಚಿ ಗ್ರಾಮ | ವೀರಾಜಪೇಟೆ ತಾಲ್ಲೂಕು |

ವಿಷಯ :– ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಖರ್ಚು ಮಾಡಿರುವ ಹಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 728 (1071)

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ ?

ಅ) 1985–86 ರಿಂದ ಈವರೆಗೆ ಪ್ರತಿವರ್ಷ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಹಾಗೂ ಹೊಸ ದೇವಸ್ಥಾನಗಳ ನಿರ್ಮಾಣಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು ?

ಆ) ಪ್ರತಿ ವರ್ಷ ಈ ಇಲಾಖೆ ಸಿಬ್ಬಂದಿಯವರಿಗೆ (1985–86) 1985 ರಿಂದ ಈವರೆಗೆ ಪ್ರತಿವರ್ಷ ಖರ್ಚು ಮಾಡುತ್ತಿರುವ ಹಣವೆಷ್ಟು ?

ಇ) ರಾಜ್ಯದಲ್ಲಿ ದೇವಸ್ಥಾನದಲ್ಲಿ ಪೂಜೆ ಮಾಡಿರುವ ಅರ್ಚಕರಿಗೆ (ಪೂಜಾರಿಗಳಿಗೆ) ಪ್ರತಿ ಜಿಲ್ಲೆಯಲ್ಲಿ ಈ ಹಿಂದೆ ಬಿಡುಗಡೆ ಮಾಡಿರುವ ಹಣವೆಷ್ಟು ?

ಈ) ಹೊನ್ನಾಳಿ ತಾಲ್ಲೂಕಿನಲ್ಲಿ ಅರ್ಚಕರಿಗೆ ಬಿಡುಗಡೆ ಮಾಡಿದ ಹಣದಲ್ಲಿ ದುರ್ವ್ಯವಹಾರ ನಡೆದಿರುವುದು ನಿಜವೆ, ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :-

| | ವರ್ಷ | ಖರ್ಚು ಮಾಡಿರುವ ಹಣ |
|---|---|---|
| ಅ) | 1985–86 | ರೂ. 76,89,209.00 |
| | 1986–87 | ರೂ. 1,37,02,000.00 |
| | 1987–88 | ರೂ. 2,09,50,000.00 |
| | 1988–89 | ರೂ. 1,58,90,000.00 |
| | 1989–90 | ರೂ. 1,57,48,975.00 |
| ಆ) | 1985–86 | ರೂ. 31,80,000.00 |
| | 1986–87 | ರೂ. 32,80,000.00 |
| | 1987–88 | ರೂ. 32,80,000.00 |
| | 1988–89 | ರೂ. 42,99,000.00 |
| | 1989–90 | ರೂ. 44,36,000.00 |

ಇ) ಅರ್ಚಕರಿಗೆ ಸರ್ಕಾರದಿಂದ ನೇರವಾಗಿ ಯಾವುದೇ ಹಣ ಪಾವತಿ ಮಾಡುವುದಿಲ್ಲ. ಆಯಾ ದೇವಾಲಯದ ಸ್ಕೇಲ್‌ಗೆ ಅನುಗುಣವಾಗಿ ಸಂಬಳ, ರುಸುಂ ಇತ್ಯಾದಿಗಳನ್ನು ಪಾವತಿಸಲಾಗುತ್ತದೆ. ಕಳೆದ 3 ವರ್ಷಗಳಲ್ಲಿ ತಸ್ಕೀಕ್ ಬಿಡುಗಡೆ ಮಾಡಿದ ಜಿಲ್ಲಾವಾರು ವಿವರದ ಪಟ್ಟಿ ಲಗತ್ತಿಸಿದೆ.

ಈ) ಹೌದು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸದರಿ ತಾಲ್ಲೂಕಿನ ತಹಸೀಲ್ದಾರ್‌ರವರನ್ನು ಅಮಾನತ್ತಿನಲ್ಲಿಡಲಾಗಿದೆ. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ತಡೆಯಾಜ್ಞೆ ನೀಡಿರುವುದರಿಂದ ಅವರನ್ನು ಸೇವೆಯಲ್ಲಿ ಮುಂದುವರಿಸಲಾಗಿದೆ. ಈ ಪ್ರಕರಣವು ಈಗ ಕರ್ನಾಟಕ ಆಡಳಿತ ಮಂಡಳಿ, ಬೆಂಗಳೂರು ಇವರ ಮುಂದೆ ವಿಚಾರಣೆಗಾಗಿ ಇದ್ದು ಸದರಿ ಆಡಳಿತ ಮಂಡಳಿಯ ತೀರ್ಪನ್ನು ನಿರೀಕ್ಷಿಸಲಾಗುತ್ತಿದೆ.

1987–88 ರ ಸಾಲಿನಲ್ಲಿ ತಸ್ಕೀಕ್ ಮೊತ್ತ ಬಿಡುಗಡೆ ಮಾಡಿರುವ ವಿವರ :

| | | |
|---|---|---|
| 1) | ಕೋಲಾರ | 81,18,187–80 |
| 2) | ಮೈಸೂರು | 61,31,020–50 |
| 3) | ಹಾಸನ | 1,71,95,635–64 |
| 4) | ಮಂಡ್ಯ | 18,43,603–08 |
| 5) | ತುಮಕೂರು | 30,92,900–00 |
| 6) | ಚಿತ್ರದುರ್ಗ | 14,17,920–24 |
| 7) | ಶಿವಮೊಗ್ಗ | 1,13,65,469–50 |
| | | 4,91,64,736–76 |

1988–89ರ ಸಾಲಿನಲ್ಲಿ ತಸ್ಕೀಕ್ ಮೊತ್ತ ಬಿಡುಗಡೆ ಮಾಡಿರುವ ವಿವರ :

| | | |
|---|---|---|
| 1) | ಬೆಂಗಳೂರು | 15,68,486–60 |
| 2) | ತುಮಕೂರು | 34,59,923–00 |
| 3) | ಕೋಲಾರ | 10,77,112–60 |
| 4) | ಮಂಡ್ಯ | 32,60,244–00 |
| 5) | ಹಾಸನ | 2,83,92,818–00 |
| 6) | ಮೈಸೂರು | 66,55,444–00 |
| 7) | ಚಿತ್ರದುರ್ಗ | 4,75,462–00 |
| 8) | ಚಿಕ್ಕಮಗಳೂರು | 23,02,346–50 |
| 9) | ಶಿವಮೊಗ್ಗ | 3,09,091–00 |
| | | 4,75,00,945–00 |

1989–90ರ ಸಾಲಿನಲ್ಲಿ ತಸ್ತೀಕ್ ಮೊತ್ತ ಬಿಡುಗಡೆ ಮಾಡಿರುವ ವಿವರ :

| | | |
|---|---|---|
| 1) | ಬೆಂಗಳೂರು | 1,37,96,826–00 |
| 2) | ಮೈಸೂರು | 1,91,59,123–00 |
| 3) | ಹಾಸನ | 1,66,83,997–00 |
| 4) | ಮಂಡ್ಯ | 1,46,13,545–00 |
| 5) | ತುಮಕೂರು | 1,08,87,005–00 |
| 6) | ಚಿತ್ರದುರ್ಗ | 5,38,541–00 |
| 7) | ಶಿವಮೊಗ್ಗ | 6,34,011–00 |
| 8) | ಚಿಕ್ಕಮಗಳೂರು | 93,38,211 00 |
| 9) | ಕೋಲಾರ | 36,65,883–00 |
| | | 8,93,17,142–00 |

ವಿಷಯ :– ನೆಲಮಂಗಲ ಕ್ಷೇತ್ರದಲ್ಲಿ ರೈತರಿಂದ ವಸೂಲಾದ ಟಿ. ಟಿ. ಹಣದ ಮೊತ್ತ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 729 (1087)

ಶ್ರೀ ಆಂಜನಮೂರ್ತಿ (ನೆಲಮಂಗಲ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನೆಲಮಂಗಲ ಮತ ಕ್ಷೇತ್ರದಲ್ಲಿ 1986 ರಿಂದ 1989 ರ ವರೆಗೆ ರೈತರಿಂದ ಟಿ. ಟಿ. ರೂಪದಲ್ಲಿ ವಸೂಲಾದ ಹಣವೆಷ್ಟು ?

ಆ) ಎಷ್ಟು ಜನ ಪರಿಶಿಷ್ಟ ಜಾತಿಯವರಿಂದ ಟಿ. ಟಿ. ಹಣ ವಸೂಲಾಗಿದೆ ?

ಇ) ಒಟ್ಟು ಎಷ್ಟು ಭೂಮಿಯನ್ನು ಉಳುಮೆ ಮಾಡುತ್ತಿದ್ದಾರೆ ?

ಈ) ಅದರಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರು ಎಷ್ಟು ಭೂಮಿಯನ್ನು ಉಳುಮೆ ಮಾಡುತ್ತಿದ್ದಾರೆ ?

ಉ) ಉಳುಮೆ ಮಾಡುತ್ತಿರುವ ಜಮೀನುಗಳನ್ನು ಕ್ರಮಬದ್ಧವಾಗಿ ಸಕ್ರಮಗೊಳಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :–

ಅ) 1986 ರಿಂದ 1989ರ ವರೆಗೆ ನೆಲಮಂಗಲ ತಾಲ್ಲೂಕಿನಲ್ಲಿ ಒಟ್ಟು 2.11.852 ರೂಪಾಯಿಗಳು ಟಿ. ಟಿ. ಬಾಬ್ತು ವಸೂಲಾಗಿದೆ.

ಆ) 1239 ಪರಿಶಿಷ್ಟ ಜಾತಿ ಜನಗಳಿಂದ ಹಣವು ವಸೂಲಾಗಿದೆ.

ಇ) 1266 ಎಕರೆ 32 ಗುಂಟೆ ಜಮೀನನ್ನು 1665 ಮಂದಿ ರೈತರು ಉಳುತ್ತಿದ್ದಾರೆ.

ಈ) 955 ಎಕರೆ 32 ಗುಂಟೆ ಜಮೀನನ್ನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರು ಉಳುತ್ತಿದ್ದಾರೆ.

ಉ) ಬಗರ್ ಹುಕುಂ ಸಾಗುವಳಿ ಸಕ್ರಮೀಕರಣಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯಿದೆ 1964 ಕ್ಕೆ ಸೂಕ್ತ ತಿದ್ದುಪಡಿಯನ್ನು ಮಾಡಲು ಸರ್ಕಾರವು ತೀರ್ಮಾನಿಸಿದೆ.

ವಿಷಯ :– ಮೂಡಿಗೆರೆ ತಾಲ್ಲೂಕಿನ ಹರಿಜನ ಗಿರಿಜನರಿಗೆ ಕೊಟ್ಟಿರುವ ದರ್ಖಾಸ್ತು ಭೂಮಿಯ ರೆಕಾರ್ಡುಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 730 (1142)

ಶ್ರೀಮತಿ ಮೋಟಮ್ಮ (ಮೂಡಿಗೆರೆ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?